**CC No.10/2018**
**PW.1**

**<u>ಸಾಕ್ಷಿಗೆ ದಿನಾಂಕ 19.07.2024 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

<u>ಮುಂದುವರೆದ **ಪಾಟೀ ಸವಾಲುಃ**</u> ಮಾನ್ಯ ಸ.ಸ.ಅಭಿಯೋಕರವರಿಂದ

ಅಮಾನತ್ತುಪಡಿಸಿಕೊಂಡಂತಹ ಎರಡು ಹಿಡಿ ಗಾತ್ರದ ಕಲ್ಲುಗಳನ್ನು ಮಾನ್ಯ ನ್ಯಾಯಾಲಯದ ಅನುಮತಿಯನ್ನು ಪಡೆದು ದೊಡ್ಡಬಳ್ಳಾಪುರ ಉಪವಿಭಾಗಧಿಕಾರಿಗಳಿಗೆ ಹಸ್ತಾಂತರಿಸಿರುತ್ತಾರೆ. ಸದರಿ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದ

ನಿಪಿ-1 ನ್ನು ನನ್ನ ಹೇಳಿಕೆಯ ಮೇರೆಗೆ ನನ್ನ ಸ್ನೇಹಿತರು ಬರೆದಿರುತ್ತಾರೆ. ದಿಃ 05.03.2017 ರಂದು ಆರೋಪಿ ದೊಡ್ಡಬೆಳವಂಗಲದಲ್ಲಿ ವಾಸವಿದ್ದರು ಎಂದರೆ ಗೊತ್ತಿರುವುದಿಲ್ಲ. ಸದರಿ ದಿನ ಅವರ ತಾಯಿಯೂ ಸಹ ಮನೆಯಲ್ಲಿದ್ದರು. ಆರೋಪಿಯು ದಿಃ 05.03.2017 ಕ್ಕೂ ಮೊದಲು ಅಕ್ರಮವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಇಟ್ಟುಕೊಂಡಿದ್ದಾನೆಂದು ದೂರು ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದಕ್ಕೂ ಮೊದಲೂ ನನಗೆ ಸದರಿ ವಿಷಯ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ಸ್ಥಳ ಆರೋಪಿಯ ಮನೆಯಾಗಿದ್ದು, ಅದು ಸುಮಾರು 150 ವರ್ಷಗಳ ಹಳೆಯ ಮನೆಯಾಗಿರುತ್ತದೆ ಎಂದರೆ ಸರಿ. ಅದು ಮಣ್ಣಿನ ಹಾಗೂ ಹಂಚಿನ ಮನೆಯಿಂದ ಕೂಡಿದ್ದಾಗಿರುತ್ತದೆ. ಅದು ಮಣ್ಣಿನ ಮನೆ ಹಾಗೂ ಹಳೆಯ ಮನೆಯಾಗಿರುವುದರಿಂದ ಅದು ಕುಸಿದುಬಿದ್ದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯು ಯಾವುದೇ ಸಿಲಿಂಡರ್ ಸ್ಫೋಟದಿಂದ ಬಿದ್ದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಯಾರೂ ವಾಸವಾಗಿರಲಿಲ್ಲ ಒಂದು ವೇಳೆ ವಾಸವಾಗಿದ್ದರೆ ಅವರಿಗೂ ತೊಂದರೆಯಾಗುತ್ತಿತ್ತು ಎಂದರೆ ಸಾಕ್ಷಿಯು ಘಟನೆ ನಡೆಯುವ ಸಮಯಕ್ಕೆ ಅವರು ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಘಟನೆ ನಡೆದ ದಿನ ಆರೋಪಿಯ ತಾಯಿಯಾಗಲೀ, ಆರೋಪಿಯಾಗಲೀ ಮನೆಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಊರಿನವರೆಲ್ಲರೂ ಹೇಳುತ್ತಾರೆ ಅವರು ಮನೆಯಲ್ಲಿ ಇದ್ದರು ಎಂದು ಹಾಗೂ ನಾನು ಸಹ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಯಾವ ಕಂಪೆನಿಯ ಸಿಲಿಂಡರ್ ಹಾಗೂ ಎಷ್ಟು ಗಾತ್ರದ ಸಿಲಿಂಡರ್‌ಗಳು ಆಗಿರುತ್ತವೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿತರ ವಿರುದ್ಧ ಅನಿಲ ದುರಂತದಿಂದ ಘಟನೆ ಸಂಭವಿಸಿರುತ್ತದೆ ಎಂದು ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸರ್ವೇ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಶಾಮಿಯಾನ ಅಂಗಡಿಯನ್ನು ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈಗಲೂ ಸಹ ಶಾಮಿಯಾನ ಅಂಗಡಿಯನ್ನು ನಡೆಸುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ಘಟನಾ ಸ್ಥಳಕ್ಕೆ ದಿಃ 05.03.2017 ರಂದು ಬೆಳಿಗ್ಗೆ 10-00 ಗಂಟೆ ಸಮಯಕ್ಕೆ ಬಂದಿರುತ್ತಾರೆ. ದಿಃ 05.03.2017 ರಂದು ಘಟನಾ ಸ್ಥಳದಲ್ಲಿ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರಲಿಲ್ಲ ಎಂದರೆ ಸರಿ. ಘಟನೆ ನಡೆದ ದಿನ ಪೋಲೀಸರು ಸ್ಥಳಕ್ಕೆ

ಬಂದಿರಲಿಲ್ಲ ಹಾಗೂ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಲ್ಲುಗಳು ಹಳ್ಳಿಗಳಲ್ಲಿ ಸಿಗುತ್ತವೆ ಎಂದರೆ ಅಮಾನತ್ತುಪಡಿಸಿಕೊಂಡ ಕಲ್ಲುಗಳ ಮೇಲೆ ಬೆಂಕಿಯಿಂದ ಸುಟ್ಟ ಗುರುತುಗಳು ಇದ್ದವು ಎಂದು ನುಡಿಯುತ್ತಾರೆ. ಸದರಿ ದಿನ ಪೋಲೀಸರು ಯಾವುದೇ ಕಲ್ಲುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಿಲಿಂಡರ್‌ಗಳಿಂದ ಯಾವುದೇ ಅನಿಲ ಸೋರಿಕೆಯಾಗಿರುವುದಿಲ್ಲ ಮತ್ತು ಅದರಿಂದ ಯಾವುದೇ ಸ್ಫೋಟ ಸಂಭವಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಅನಿಸಿಕೆಯ ಮೇರೆಗೆ ಅನಿಲ ಸೋರಿಕೆಯಿಂದ ಘಟನೆ ನಡೆದಿದೆ ಎಂದು ನುಡಿಯುತ್ತಾರೆ.

ಪೋಲೀಸರು ಪಂಚನಾಮೆಯ ಸಮಯದಲ್ಲಿ ಆರೋಪಿಯ ಮನೆಯ ಚೆಕ್ಕುಬಂಧಿಯನ್ನು ಮಾಡಿ ಅದು ಒಟ್ಟು 70 X 40 ಇರುತ್ತದೆ ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅಮಾನತ್ತುಪಡಿಸಿಕೊಂಡ ಸಿಲಿಂಡರ್‌ಗಳಲ್ಲಿ ಯಾವುದೇ ಸಿಲಿಂಡರ್‌ಗಳು ಸ್ಫೋಟಗೊಂಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಮಹಜರ್ ಸಮಯದಲ್ಲಿ ತೆಗೆದಂತಹ ಛಾಯಾಚಿತ್ರಗಳನ್ನು ತೋರಿಸಿ ಅದರಲ್ಲಿರುವ ಸಿಲಿಂಡರ್‌ಗಳು ಸ್ಫೋಟಗೊಂಡಿರುವುದಿಲ್ಲ ಅವುಗಳು ಯಥಾ ಸ್ಥಿತಿಯಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಅವುಗಳ ಮೇಲೆ ಸೀಲ್ ಇದ್ದು, ಒಂದು ಸಿಲಿಂಡರ್ ಕೆಳಗಿನಿಂದ ಲೀಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿಲಿಂಡರ್‌ಗಳು ಗೃಹಬಳಕೆಯ ಸಿಲಿಂಡರ್‌ಗಳಾಗಿರುತ್ತವೆ ಎಂದರೆ ಸರಿ. ಸದರಿ ಸಿಲಿಂಡರ್‌ಗಳನ್ನು ಮನೆಯಿಂದ ಹೊರಗಡೆ ತೆಗೆದುಕೊಂಡು ಬಂದು ಛಾಯಾಚಿತ್ರಗಳನ್ನು ತೆಗೆದಿರಲಾಗಿರುತ್ತದೆ ಎಂದರೆ ಸರಿ. ಸದರಿ ಸಿಲಿಂಡರ್ ಗಳು ಆರೋಪಿಗೆ ಸಂಬಂಧಿಸಿದ ಸಿಲಿಂಡರ್‌ಗಳು ಆಗಿರುವುದಿಲ್ಲ ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದಾಗಿರುತ್ತವೆ ಎಂದರೆ ಸರಿಯಲ್ಲ. ಘಟನೆಯ ಮಾಹಿತಿಯನ್ನು ಮಂಜುನಾಥ ಗ್ಯಾಸ್ ಏಜೆನ್ಸಿರವರಿಗೆ ತಿಳಿಸಲಾಗಿದ್ದು, ಅವರೂ ಸಹ ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**